ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1590 (1839)

ಶ್ರೀ ಎಸ್.ಕೃಷ್ಣಪ್ಪ (ಬನ್ನೂರು):- ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಟಿ.ನರಸೀಪುರ ತಾಲ್ಲೂಕಿನ ದೊಡ್ಡಬಾಗಿಲು ಗ್ರಾಮದಲ್ಲಿ ಪೋಲೀಸ್ ಔಟ್‌ಪೋಸ್ಟ್ ತೆಗೆಯುವ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ 1995-96ರಲ್ಲಿ ಈ ಗ್ರಾಮದಲ್ಲಿ ಪೋಲೀಸ್ ಔಟ್‌ಪೋಸ್ಟ್ ತೆರೆಯಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಪಿ.ಜಿ.ಆರ್.ಸಿಂಧ್ಯ (ಗೃಹ ಸಚಿವರು):-

ಅ) ಸದ್ಯಕ್ಕೆ ಅವಶ್ಯಕತೆ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ವಿಷಯ: ಸರ್ಕಾರದ ಸಚಿವಾಲಯದಲ್ಲಿ ಕನ್ನಡ ಶ್ರೇಫ್ರುಲಿಪಿಗಾರರ ಹಾಗೂ ಬೆರಳಚ್ಚುಗಾರರ ಹುದ್ದೆಗಳ ಭರ್ತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1592 (1893)

ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್):- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ)ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿ ಹಾಗೂ ಇಲಾಖಾ ಮುಖ್ಯಾಧಿಕಾರಿಗಳ ಕಛೇರಿಗಳಲ್ಲಿ ಖಾಲಿ ಇರುವ ಕನ್ನಡ ಶೀಫ್ರುಲಿಪಿಗಾರರ ಮತ್ತು ಬೆರಳಚ್ಚುಗಾರರ ಹುದ್ದೆಗಳ ಸಂಖ್ಯೆ ಎಷ್ಟು?

ಆ)ಖಾಲಿ ಇರುವ ಸದರಿ ಹುದ್ದೆಗಳಿಗೆ ನೇಮಕಾತಿ ಮಾಡಲು ನೇಮಕಾತಿ ಪ್ರಾಧಿಕಾರಕ್ಕೆ ಯಾವ ದಿನಾಂಕಕ್ಕೆ ತಿಳಿಸಲಾಗಿದೆ.

ಇ) ಖಾಲಿ ಇರುವ ಹುದ್ದೆಗಳಿಗೆ ಇಲ್ಲಿಯವರೆಗೂ ನೇಮಕಾತಿಯ ಬಗ್ಗೆ ಅಧಿಸೂಚನೆ ಹೊರಡಿಸದಿರಲು ಕಾರಣಗಳೇನು?

ಈ) ಕೊರತೆ ಇರುವುದನ್ನು ತಿಳಿಸಿ ಕೂಡಲೇ ನೇಮಕಾತಿ ಮಾಡಬೇಕೆಂದು ಕೋರಿಕೆ ಬರುತ್ತಿಲ್ಲವೆ.

ಉ) ಹಾಗಿದ್ದಲ್ಲಿ ಇನ್ನು ಎಷ್ಟು ದಿನಗಳಲ್ಲಿ ನೇಮಕಾತಿ ಪ್ರಾಧಿಕಾರವು ಅಧಿಸೂಚನೆಯನ್ನು ಹೊರಡಿಸುತ್ತದೆ ಹಾಗೂ ಆಯ್ಕೆ ಪಟ್ಟಿಯನ್ನು ಪ್ರಕಟಿಸುತ್ತದೆ.

ಊ) ನಿಗದಿಯಾದ ದಿನಾಂಕವನ್ನು ಗೊತ್ತು ಪಡಿಸಲಾಗುವುದೇ ಕನ್ನಡದ ಬೆಳವಣಿಗೆಗೆ ಪೂರಕವಾಗಿರುವ ಈ ಹುದ್ದೆಗಳನ್ನು ತ್ವರಿತವಾಗಿ ತುಂಬುವ ವಿಚಾರದಲ್ಲಿ ಸರ್ಕಾರದ ನಿಲುವೇನು?

ಶ್ರೀ ಹೆಚ್.ಡಿ.ದೇವೇಗೌಡ (ಮುಖ್ಯ ಮಂತ್ರಿಗಳು):-

ಅ) ಶ್ರೇಫ್ರುಲಿಪಿಗಾರರು - 422
ಬೆರಳಚ್ಚುಗಾರರು - 1116

ಆ) ದಿನಾಂಕ 2-3-1994ರಂದು ಆದೇಶ ಹೊರಡಿಸಿದೆ. 295 ಶ್ರೇಫ್ರುಲಿಪಿಗಾರರ 773 ಬೆರಳಚ್ಚುಗಾರರ ಹುದ್ದೆಗಳನ್ನು ಬಿಡುಗಡೆ ಮಾಡಲಾಗಿದೆ.

ಇ) ಮೀಸಲಾತಿ ನೀತಿಯು ಹಲವಾರು ಬಾರಿ ಬದಲಾವಣೆಗೊಳಪಟ್ಟಿದ್ದರಿಂದ, ಇವುಗಳನ್ನು ತುಂಬಲಾಗಲಿಲ್ಲ. ಮೀಸಲಾತಿಯನ್ನು ಶೇಕಡ 50ಕ್ಕೆ ಮಿತಿಗೊಳಿಸುವಂತೆ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದ ಆಧಾರದ ಮೇಲೆ ನೇರ ನೇಮಕಾತಿಗೆ ಪರಿಷ್ಕೃತ ಮೀಸಲಾತಿ ರೋಸ್ಟರ್‌ನ್ನು ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 8 ಸೆಹಿಮ 95 ದಿನಾಂಕ 20-6-95ರಲ್ಲಿ ನಿಗಧಿಪಡಿಸಲಾಗಿದೆ.

ಈ) ಹೌದು.

ಉ) ಖಾಲಿ ಹುದ್ದೆಗಳನ್ನು ಪ್ರಕಟಿಸಿ ಅರ್ಜಿಗಳನ್ನು ಆಹ್ವಾನಿಸುವ ಮೂಲಕ ನೇಮಕಾತಿ ಪ್ರಕ್ರಿಯೆಗಳನ್ನು ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಊ) ಹೊಸ ಮೀಸಲಾತಿಯನ್ವಯ ಹುದ್ದೆಗಳನ್ನು ಪುನರ್‌ವಿಂಗಡಿಸಿ. ತುರ್ತುಕ್ರಮ ಕೈಗೊಳ್ಳಲಾಗುವುದು.

ವಿಷಯ :- ಸಚಿವಾಲಯದಲ್ಲಿ ಗ್ರೂಪ್-ಸಿ ನೌಕರರ ವರ್ಗಾವಣೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1593 (1895)

ಶ್ರೀ ಕುಂಬಳೆ ಸುಂದರರಾವ್ (ಸುರತ್ಕಲ್):- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿ 10 ವರ್ಷಗಳಿಗೂ ಮೇಲ್ಪಟ್ಟು ಒಂದೇ ಇಲಾಖೆಯಲ್ಲಿ ಕೆಲಸ ನಿರ್ವಹಿಸಬೇಕೆನ್ನುವ ವಿಶೇಷ ನಿಯಮವೇನಾದರೂ ಇದೆಯೇ?

ಆ) ಹಾಗಿದ್ದಲ್ಲಿ 10 ವರ್ಷಗಳಿಗೂ ಮೇಲ್ಪಟ್ಟು ಒಂದೇ ಇಲಾಖೆಯಲ್ಲಿ ಕೆಲಸ ನಿರ್ವಹಿಸುತ್ತಿರುವವರನ್ನು ಬೇರೆ ಇಲಾಖೆಗೆ ವರ್ಗಾಯಿಸದೇ ಇರಲು ಕಾರಣವೇನು? ಅಂಥವರನ್ನು ಬೇರೆ ಇಲಾಖೆಗಳಿಗೆ ವರ್ಗಾಯಿಸಲು ಕ್ರಮ ಜರುಗಿಸಲಾಗವುದೇ?

ಶ್ರೀ ಹೆಚ್. ಡಿ. ದೇವೇಗೌಡ (ಮುಖ್ಯ ಮಂತ್ರಿಗಳು):-

ಅ) ಇಲ್ಲ

ಆ) ಕರ್ನಾಟಕ ಸರ್ಕಾರ ಸಚಿವಾಲಯದ ಕೆಲವು ಇಲಾಖೆಗಳಲ್ಲಿ ಕೆಲವೇ ಗ್ರೂಪ್ ಸಿ ವರ್ಗದ ಸಹಾಯಕರು ಶ್ರೇಫ್ರುಲಿಪಿಗಾರರು ಹಾಗೂ ಕಿರಿಯ ಸಹಾಯಕರುಗಳು ಒಂದೇ ಇಲಾಖೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದು ಅವರಗಳನ್ನು ಸಂಬಂಧಿಸಿದ ಇಲಾಖೆಯಲ್ಲಿರುವ ವಿಶಿಷ್ಟ ರೀತಿಯ ಕಾರ್ಯ ನಿರ್ವಹಣೆ ಇರುವುದನ್ನು ಪರಿಗಣಿಸಿ ಆ ಇಲಾಖೆಯ ಅನುಕೂಲಕ್ಕಾಗಿ ಆ ಸಿಬ್ಬಂದಿಗೆ ಇರುವ ವಿಷಯ ಪರಿಜ್ಞಾನ, ನಿಪುಣತೆ ಇವುಗಳನ್ನು ಪರಿಗಣಿಸಿ ಮುಂದುವರೆಸಲಾಗಿರುತ್ತದೆ. ಆದರೂ ಒಂದೇ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಇಂತಹ ಗ್ರೂಪ್ ಸಿ ನೌಕರರನ್ನು ಬೇರೆ ಇಲಾಖೆಗೆ ವರ್ಗಾಯಿಸಲು ಪರಿಶೀಲಿಸಲಾಗುವುದು.

ವಿಷಯ:- ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿ ಶಾಖಾಧಿಕಾರಿಗಳನ್ನು ತುಂಬಲು ಒತ್ತಾಯ.

ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಸಂಖ್ಯೆ : 1594 (1894)

ಶ್ರೀ ಕುಂಬಳೆ ಸುಂದರ ರಾವ್ (ಸುರತ್‌ಕಲ್):- ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?